# ೧ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1271 |
| ಸದಸ್ಯರ ಹೆಸರು | ಶ್ರೀ ಎ.ವಸಂತ ಕುಮಾರ್ |
| ಉತ್ತರಿಸುವ ದಿನಾಂಕ | 19.03.2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಯಚೂರು ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಯ ಅಧೀನದಲ್ಲಿರುವ ಒಟ್ಟು ದೇವಾಲಯಗಳೆಷ್ಟು; ಅದರಲ್ಲಿ ಎ, ಬಿ, ಸಿ ವರ್ಗದಲ್ಲಿರುವ ದೇವಸ್ಥಾನಗಳ ಒಟ್ಟು ಸಂಖ್ಯೆ ಎಷ್ಟು; | ರಾಯಚೂರು ಜಿಲ್ಲೆಯಲ್ಲಿ ಧಾರ್ಮಿಕ ದತ್ತಿ ಇಲಾಖಾ ಅಧೀನದಲ್ಲಿ ಒಟ್ಟು 1287 ಅಧಿಸೂಚಿತ ದೇವಾಲಯಗಳಿರುತ್ತವೆ. ಪ್ರವರ್ಗವಾರು ವಿವರ ಈ ಕೆಳಕಂಡಂತೆ ಇರುತ್ತದೆ:-<br><br>ಎ: 04, ಬಿ: 01, ಸಿ: 1282, ಒಟ್ಟು: 1287 |
| ಆ) | ಕಳೆದ 10 ವರ್ಷಗಳಲ್ಲಿ ಯಾವ ಯಾವ ದೇವಾಲಯಗಳನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದೆ; ಯಾವ ಯಾವ ದೇವಾಲಯಗಳನ್ನು ಸರ್ಕಾರದ ವಶದಿಂದ ಬಿಡುಗಡೆ ಮಾಡಲಾಗಿದೆ; | ಕಳೆದ 10 ವರ್ಷಗಳಲ್ಲಿ ಸರ್ಕಾರದ ವಿವಿಧ ಆದೇಶಗಳನ್ವಯ ಈ ಕೆಳಕಂಡ ದೇವಾಲಯಗಳನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಲಂ 42 ಮತ್ತು 43 ರಂತೆ ಸದರಿ ಅಧಿನಿಯಮದ ಅಧ್ಯಾಯ -8 ರ ನಿಯಂತ್ರಣಕ್ಕೆ ಒಳಪಡಿಸಿ, ಘೋಷಿತ ಸಂಸ್ಥೆಯೆಂದು ಘೋಷಿಸಿ ಸರ್ಕಾರದ ವಶಕ್ಕೆ ಪಡೆಯಲಾಗಿರುತ್ತದೆ. |

| ಎ | ಬಿ | ಸಿ | ಒಟ್ಟು |
|---|---|---|---|
| 04 | 01 | 1282 | 1287 |

| ಕ್ರ.ಸಂ | ಸಂಸ್ಥೆಯ ಹೆಸರು |
|---|---|
| 1 | ಶ್ರೀ ಮಾರಮ್ಮ ದೇವಾಲಯ, ಮಡಿವಾಳ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ |
| 2 | ಶ್ರೀ ದುರ್ಗಪರಮೇಶ್ವರಿ ದೇವಾಲಯ, ಜೆ.ಪಿ.ನಗರ 2ನೇ ಹಂತ, ಬೆಂಗಳೂರು ನಗರ ಜಿಲ್ಲೆ |
| 3 | ಶ್ರೀ ಆಂಜನೇಯಸ್ವಾಮಿ ದೇವಾಲಯ, ಕಾಡುಗುಜ್ಜನ ಹಳ್ಳಿ ಗ್ರಾಮ, ಊರ್ಡಿಗೆರೆ ಹೋಬಳಿ, ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ |
| 4 | ಶ್ರೀ ಸಿದ್ದೇಶ್ವರ ಸ್ವಾಮಿ ಮತ್ತು ಮಹದೇಶ್ವರ ಸ್ವಾಮಿ ದೇವಸ್ಥಾನ, ಸ್ವಾಂದೇನಹಳ್ಳಿ ಗ್ರಾಮ, ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ |
| 5 | ಶ್ರೀ ಮಾರಿಕಾಂಬ ದೇವಾಲಯ, ಸಾಗರ ಟೌನ್, ಶಿವಮೊಗ್ಗ ಜಿಲ್ಲೆ |
| 6 | ಶ್ರೀ ಶನೇಶ್ವರಸ್ವಾಮಿ ದೇವಾಲಯ, ಹೆಬ್ಬಾಳ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ |
| 7 | ಶ್ರೀ ಮಾರಮ್ಮ ದೇವಾಲಯ, ಟಿ.ಬೆಟ್ಟಹಳ್ಳಿ ಗ್ರಾಮ, ತಲಕಾಡು ಹೋಬಳಿ, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ |

ಮಾನ್ಯ ಉಚ್ಚನ್ಯಾಯಾಲಯದ ಮತ್ತು ಸರ್ಕಾರದ ಆದೇಶದನ್ವಯ ಈ ಕೆಳಕಂಡ ದೇವಾಲಯಗಳ ಆಡಳಿತವನ್ನು ಸರ್ಕಾರದ ವಶದಿಂದ ಪುನಃ ಟ್ರಸ್ಟ್/ಆಡಳಿತ ಮಂಡಳಿಯವರ

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಸುಪರ್ದಿಗೆ ಹಸ್ತಾಂತರ ಮಾಡಲಾಗಿರುತ್ತದೆ. ವಿವರ ಈ ಕೆಳಕಂಡಂತೆ ಇರುತ್ತದೆ:- |

| ಕ್ರ.ಸಂ | ಸಂಸ್ಥೆಯ ಹೆಸರು | ಮಾನ್ಯ ಉಚ್ಚ ನ್ಯಾಯಾಲಯ / ಸರ್ಕಾರದ ಆದೇಶ |
|---|---|---|
| 1 | ಶ್ರೀ ಕಾಳಿಕಾ ದುರ್ಗಾಪರಮೇಶ್ವರಿ ದೇವಾಲಯ, ವಿದ್ಯಾರಣ್ಯಪುರ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಇವರ ನ್ಯಾಯಾಲಯದ ಪ್ರಕರಣ ಸಂಖ್ಯೆ: ಕಂಇ 94 ಮುದ್ರಾಪ್ರ 2019, ದಿನಾಂಕ:06.11.2021 |
| 2 | ಶ್ರೀ ಭಗವಾನ ಮಾರುತಿ ದೇವಾಲಯ, ಅರಮನೆ ರಸ್ತೆ, ಬೆಂಗಳೂರು | ರಿಟ್ ಅರ್ಜಿ ಸಂಖ್ಯೆ:164/2020 |
| 3 | ಗೊರವನಹಳ್ಳಿ ಶ್ರೀ ಮಹಾಲಕ್ಷ್ಮೀ ದೇವಾಲಯ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ | ರಿಟ್ ಅರ್ಜಿ ಸಂಖ್ಯೆ:38430/2015 ಮತ್ತು 40258-40260/ 2015 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಈಗ ಮುಜರಾಯಿ ಇಲಾಖೆ ಯಾವ ಕಾಯ್ದೆ ಅನ್ವಯ ನಡೆಯುತ್ತಿರುವುದು; ಈಗಿರುವ ಕಾಯ್ದೆ ಈಗಾಗಲೇ 2 ಬಾರಿ ನ್ಯಾಯಾಲಯದಿಂದ ರದ್ದು ಮಾಡಿರುವುದು ಸರ್ಕಾರದ ಗಮನಕ್ಕಿದೆಯೇ; ರದ್ದಾಗಿರಲು ಕಾರಣವೇನು; | ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997 ದಿನಾಂಕ:01.03.2003ರಿಂದ ಜಾರಿಗೆ ಬಂದಿರುತ್ತದೆ.<br><br>ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆ 1997 ಮತ್ತು ತಿದ್ದುಪಡಿ ಕಾಯ್ದೆ 2011 ಹಾಗೂ 2ನೇ ತಿದ್ದುಪಡಿ ಕಾಯ್ದೆ 2012 ಮತ್ತು ಸದರಿ ಕಾಯ್ದೆಗಳಿಗೆ ಅನುಗುಣವಾಗಿ ರೂಪಿಸಿರುವ ನಿಯಮಗಳು 2002ರಡಿ, ಇವುಗಳಲ್ಲದೇ, ಅಧಿಸೂಚಿತ ಸಂಸ್ಥೆಗಳ ವತಿಯಿಂದ ನಡೆಸಲ್ಪಡುತ್ತಿರುವ ಶಿಕ್ಷಣ ಸಂಸ್ಥೆಗಳ ಆಡಳಿತ ನಿರ್ವಹಣೆಗಾಗಿ ಸರ್ಕಾರದ ಆದೇಶ ಸಂ: ಕಂಇ 66 ಮುಸೇವಿ 2017, ದಿನಾಂಕ:24.12.2018ರನ್ವಯ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ನಿಯಮಗಳು, 2018ನ್ನು ಜಾರಿಗೆ ತರಲಾಗಿದ್ದು, ಇದರನ್ವಯ ಪ್ರಸ್ತುತ ಧಾರ್ಮಿಕ ದತ್ತಿ ಇಲಾಖೆಯು ಕಾರ್ಯ ನಿರ್ವಹಿಸುತ್ತಿದೆ.<br><br>ಈ ಹಿಂದೆ ರಾಜ್ಯದಲ್ಲಿ ವಿವಿಧ ಪ್ರಾಂತ್ಯಗಳಲ್ಲಿ ಧಾರ್ಮಿಕ ದತ್ತಿ ಇಲಾಖೆಗೆ ಸಂಬಂಧಿಸಿದಂತೆ ವಿವಿಧ 06 ಕಾಯ್ದೆಗಳು ಜಾರಿಯಲ್ಲಿದ್ದು, ಸದರಿ ಕಾಯ್ದೆಗಳಲ್ಲಿನ ಉದ್ದೇಶಗಳು ಮತ್ತು ಉಪಬಂಧಗಳು ಒಂದಕ್ಕೊಂದು ವ್ಯತಿರಿಕ್ತವಾಗಿದ್ದು, ಇದರಿಂದಾಗಿ ಆಡಳಿತಾತ್ಮಕವಾಗಿ ತೊಡಕುಗಳು ಉಂಟಾಗುತ್ತಿತ್ತು. ಅಲ್ಲದೆ, ಮದ್ರಾಸ್ ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿಗಳ |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | | ಅಧಿನಿಯಮ 1951 ರ ಅಡಿಯಲ್ಲಿ ಉಡುಪಿ ಶ್ರೀ ಅದಮಾರು ಮಠದ ವತಿಯಿಂದ ತೆರಿಗೆ ವಂತಿಗೆಯನ್ನು ವಸೂಲು ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ, ಪೀಠಾಧಿಪತಿಗಳು ಧಾರ್ಮಿಕ ದತ್ತಿ ಆಯುಕ್ತರು ಹಾಗೂ ಇತರರ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ಪ್ರಕರಣದಲ್ಲಿ (AIR 1980 SC 1) ನೀಡಿರುವ ತೀರ್ಪಿನಲ್ಲಿ ರಾಜ್ಯದಲ್ಲಿರುವ ಎಲ್ಲಾ ಮಠಗಳು ಹಾಗೂ ದೇವಸ್ಥಾನಗಳಿಗೆ ಏಕ ರೂಪವಾದ ಕಾಯ್ದೆಯನ್ನು ಜಾರಿಗೆ ತರಲು ರಾಜ್ಯ ಸರ್ಕಾರಕ್ಕೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರ್ದೇಶನ ನೀಡಿರುತ್ತದೆ.<br><br>ಇದರಿಂದಾಗಿ, ಸರ್ಕಾರವು ದಿನಾಂಕ:01.05.2003 ರಿಂದ ಅನ್ವಯವಾಗುವಂತೆ ರಾಜ್ಯದ ಎಲ್ಲಾ ಪ್ರಾಂತ್ಯಗಳ ಜಿಲ್ಲೆಗಳಿಗೆ ಒಂದೇ ತೆರನಾದ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ಅನ್ನು ಜಾರಿಗೆ ತಂದಿದ್ದು, ತತ್ಪರಿಣಾಮವಾಗಿ ಮೇಲ್ಕಂಡ ಕಾಯ್ದೆಗಳು ನೂತನ ಕಾಯ್ದೆಯ ಸೆಕ್ಷನ್ 78(2)ರ ಅನ್ವಯ ನಿರಸನಗೊಂಡಿರುತ್ತವೆ.<br><br>ಸದರಿ ಕಾಯ್ದೆಯ ಸಿಂಧುತ್ವವನ್ನು ಪ್ರಶ್ನಿಸಿ, ಹಲವಾರು ದೇವಾಲಯಗಳ ಪ್ರತಿನಿಧಿಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ: 31937/2003 ಹಾಗೂ ಇತರೆ ರಿಟ್ ಅರ್ಜಿಗಳನ್ನು ದಾಖಲು ಮಾಡಿದ್ದು, ಎಲ್ಲಾ ರಿಟ್ ಅರ್ಜಿಗಳನ್ನು ಒಟ್ಟುಗೂಡಿಸಿ ದಿನಾಂಕ:09.09.2005 ರಂದು ನೀಡಿರುವ ತೀರ್ಪಿನಲ್ಲಿ ರಿಟ್ ಅರ್ಜಿಗಳನ್ನು ವಜಾಗೊಳಿಸಿ ಕಾಯ್ದೆಯ ಸಿಂಧುತ್ವವನ್ನು ಎತ್ತಿ ಹಿಡಿದಿರುತ್ತದೆ.<br><br>ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ:09.09.2005ರ ತೀರ್ಪಿನ ವಿರುದ್ಧ ವಿಭಾಗೀಯ ಪೀಠದಲ್ಲಿ ಹಲವು ದೇವಾಲಯಗಳ ಪ್ರತಿನಿಧಿಗಳು ರಿಟ್ ಅಪೀಲು ಸಂ: 3440/2005 ಹಾಗೂ ಇತರೆ ರಿಟ್ ಅಪೀಲುಗಳನ್ನು ದಾಖಲಿಸಿದ್ದು, ಸದರಿ ಅಪೀಲುಗಳನ್ನು ಒಟ್ಟುಗೂಡಿಸಿ ದಿನಾಂಕ:08.09.2006 ರಂದು ನೀಡಿರುವ ತೀರ್ಪಿನಲ್ಲಿ ರಿಟ್ ಅಪೀಲುಗಳನ್ನು ಪುರಸ್ಕರಿಸಿ, ಕಾಯ್ದೆಯು Article 14 (Right Equality) ಮತ್ತು 26 (Right to Religious Freedom) ಉಲ್ಲಂಘನೆ ಮಾಡಿದ್ದು, ಕಾಯ್ದೆಯನ್ನು ಅಸಂವಿಧಾನಿಕವೆಂದು ರದ್ದುಪಡಿಸಿರುತ್ತದೆ ಹಾಗೂ ಕಾಯ್ದೆಯನ್ನು ಹೊಸದಾಗಿ ಜಾರಿಗೆ ತರುವ ಸ್ವಾತಂತ್ರ್ಯವನ್ನು ಸರ್ಕಾರಕ್ಕೆ ನೀಡಿರುತ್ತದೆ.<br><br>ಸರ್ಕಾರವು ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ:08.09.2006ರ ತೀರ್ಪನ್ನು ಪ್ರಶ್ನಿಸಿ, ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್. ಎಲ್. ಪಿ. ಸಂ: 5398/2007 (ಸದರಿ ಪ್ರಕರಣವು ನಂತರದಲ್ಲಿ ಸಿವಿಲ್ ಅಪೀಲು ಸಂ: 5924/2008 ಎಂದು ಪರಿವರ್ತಿತವಾಗಿದೆ) ಸದರಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ;02.04.2007 ರಂದು ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪು ದಿನಾಂಕ:08.09.2006ಕ್ಕೆ ತಡೆಯಾಜ್ಞೆ ನೀಡಿರುತ್ತದೆ.<br><br>ಸರ್ಕಾರವು ದಿನಾಂಕ:20.01.2007ರ ಆದೇಶದನ್ವಯ ಕಾಯ್ದೆಗೆ ಸೂಕ್ತ ತಿದ್ದುಪಡಿಗಳನ್ನು ತರುವ ಸಲುವಾಗಿ ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರಾಮಾಜೋಯಿಸ್ ರವರ ಅಧ್ಯಕ್ಷತೆಯಲ್ಲಿ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ರಚಿಸಿದ ಉನ್ನತ ಮಟ್ಟದ ಸಮಿತಿಯು ದಿನಾಂಕ:13.09.2007 ರಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ.<br><br>ಸರ್ಕಾರವು ಉನ್ನತ ಮಟ್ಟದ ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸಿ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಅಧಿನಿಯಮ 2011ಅನ್ನು ದಿನಾಂಕ:04.05.2011 ರಿಂದ ಅನ್ವಯವಾಗುವಂತೆ ಜಾರಿಗೆ ತಂದಿರುತ್ತದೆ ಹಾಗೂ ತಿದ್ದುಪಡಿ ಕಾಯ್ದೆಗೆ ಅನುಗುಣವಾಗಿ ನಿಯಮಾವಳಿಗಳನ್ನು ದಿನಾಂಕ:27.01.2012ರಿಂದ ಅನ್ವಯವಾಗುವಂತೆ ಜಾರಿಗೆ ತಂದಿರುತ್ತದೆ.<br><br>ತಿದ್ದುಪಡಿ ಅಧಿನಿಯಮ 2011ರ ಸಿಂಧುತ್ವವನ್ನು ಪ್ರಶ್ನಿಸಿ, ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಹಲವು ರಿಟ್ ಅರ್ಜಿಗಳು ದಾಖಲಾಗಿದ್ದು, ಮಾನ್ಯ ಉಚ್ಛ ನ್ಯಾಯಾಲಯವು ಸದರಿ ರಿಟ್ ಅರ್ಜಿಗಳನ್ನು (ರಿಟ್ ಅರ್ಜಿ ಸಂ:65648-65680/2011, 64805-868/2011 ಹಾಗೂ ಇತರ ರಿಟ್ ಅರ್ಜಿಗಳು) ಒಟ್ಟುಗೂಡಿಸಿ ದಿನಾಂಕ:17.11.2015 ರಂದು ಇತ್ಯರ್ಥಪಡಿಸಿ ನೀಡಿರುವ ತೀರ್ಪಿನಲ್ಲಿ ಸದರಿ ರಿಟ್ ಅರ್ಜಿಗಳನ್ನು ಪುರಸ್ಕರಿಸಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಅಧಿನಿಯಮ 2011 ಹಾಗೂ 2ನೇ ತಿದ್ದುಪಡಿ ಅಧಿನಿಯಮ 2012 ಅನ್ನು ರದ್ದುಪಡಿಸಿರುತ್ತದೆ.<br><br>ಮಾನ್ಯ ಉಚ್ಛ ನ್ಯಾಯಾಲಯದ ದಿನಾಂಕ:17.11.2015 ರ ತೀರ್ಪಿನ ವಿರುದ್ಧ ರಾಜ್ಯ ಸರ್ಕಾರವು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಪ್ರಕರಣ ಎಸ್.ಎಲ್.ಪಿ. ಸಂಖ್ಯೆ:6834-6959/2016 ಪ್ರಕರಣವನ್ನು ದಾಖಲು ಮಾಡಿರುತ್ತದೆ. ಸದರಿ ಎಸ್.ಎಲ್.ಪಿ. ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ದಿನಾಂಕ:18.04.2016 ರಂದು ನೀಡಿರುವ ಮಧ್ಯಂತರ ಆದೇಶದಲ್ಲಿ ಮಾನ್ಯ ಉಚ್ಛ ನ್ಯಾಯಾಲಯದ ದಿನಾಂಕ:17.11.2015ರ ತೀರ್ಪಿಗೆ ತಡೆಯಾಜ್ಞೆ ನೀಡಿರುತ್ತದೆ. ಈ ಎರಡೂ ಪ್ರಕರಣಗಳು ಪ್ರಸ್ತುತ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಮುಂದೆ ಇತ್ಯರ್ಥಕ್ಕೆ ಬಾಕಿ ಇರುತ್ತವೆ.<br><br>ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯಿಂದಾಗಿ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆ 1997 ಮತ್ತು ತಿದ್ದುಪಡಿ ಕಾಯ್ದೆ 2011 ಮತ್ತು 2ನೇ ತಿದ್ದುಪಡಿ ಕಾಯ್ದೆ 2012 ರ ಕಾಯ್ದೆಗಳು ಮತ್ತು ಸದರಿ ಕಾಯ್ದೆಗಳಿಗೆ ಅನುಗುಣವಾಗಿ ರೂಪಿಸಿರುವ ನಿಯಮಗಳ ಅಡಿಯಲ್ಲಿ ಪ್ರಸ್ತುತ ಇಲಾಖೆಯು ಕಾರ್ಯನಿರ್ವಹಿಸುತ್ತಿದೆ. ಸಧ್ಯ, ಮಾನ್ಯ ಸರ್ವೋಚ್ಛ ನ್ಯಾಯಾಲಯದ ಅಂತಿಮ ತೀರ್ಪನ್ನು ನಿರೀಕ್ಷಿಸಲಾಗುತ್ತಿದೆ. |

ಸಂಖ್ಯೆ: ಕಂಇ 99 ಮುಸಪ್ರ 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು.